**ಒ.ಎಸ್.ನಂಬ್ರ: 345/2023** **ಪಿ.ಡಬ್ಲ್ಯೂ ಃ 1**

ದಿನಾಂಕ: 13-09-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಶ್ರೀ ಎನ್.ಎಸ್.ಆರ್.ಬಿ. ವಕೀಲರಿಂದ**

ನಾನು ಹೋಟೆಲನ್ನು ಕ್ಲೋಸ್ ಮಾಡಿ 10-15 ವರ್ಷವಾಗಿದೆ. ಸದರಿ ಹೋಟೆಲ್ ಬೆಂಗಳೂರಿನ ಆನೆಕಲ್ ನಲ್ಲಿ ಇತ್ತು. ನಾನು ನನ್ನ ಹೆಂಡತಿಯ ತಂದೆಯ ಹೋಟೆಲ್ ನಲ್ಲಿ ಕೆಲಸಕ್ಕೆ ಇದ್ದೆ. ನಾನು ನಾಲ್ಕು ವರ್ಷ ಹೊಟೇಲ್ ನಲ್ಲಿ ಕೆಲಸ ಮಾಡಿದ್ದೆ. ಈಗ ಯಾವುದೇ ಉದ್ಯೋಗವಿಲ್ಲ. ನನ್ನ ಹೆಂಡತಿ ಶಿರೂರಿನ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಟೀಚರ್. ಅವರು ಯಾವಾಗ ಕೆಲಸಕ್ಕೆ ಸೇರಿರುತ್ತಾರೆ ಎಂದು ಗೊತ್ತಿಲ್ಲ. ಅವರು ನಿವೃತ್ತಿಯಾಗಿ ಐದು ವರ್ಷವಾಗಿದೆ. ಅವರು ಎಷ್ಟು ವರ್ಷ ಸೇವೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ನನ್ನ ಹೆಂಡತಿ ನನಗಿಂತ ನಾಲ್ಕು ವರ್ಷ ಪ್ರಾಯದಲ್ಲಿ ಚಿಕ್ಕವರು. ಅವರು 60 ವರ್ಷಕ್ಕೆ ನಿವೃತ್ತಿ ಹೊಂದಿರುತ್ತಾರೆ.

2. ನನ್ನ ಖಾಯಂ ವಾಸದ ಮನೆ ಬೈಂದೂರಿನ ಕಾರಿಕಟ್ಟೆಯಲ್ಲಿ ಇದೆ. ಆ ಮನೆಯಲ್ಲಿ ನಾನು, ತಂಗಿ, ತಂಗಿಯ ಮಕ್ಕಳು ವಾಸವಿದ್ದೇವೆ. ನನ್ನ ಹೆಂಡತಿ ಆನೆಕಲ್ಲಿನಲ್ಲಿ ವಾಸ್ತವ್ಯವಿದ್ದರು, ಈಗ ಬೈಂದೂರಿನಲ್ಲಿ ವಾಸ್ತವ್ಯವಿದ್ದಾರೆ. ಅವರು ಬೈಂದೂರಿನ ಯಡ್ತರೆಯಲ್ಲಿ ವಾಸವಿದ್ದಾರೆ. ನಾನು ಕಾರಿಕಟ್ಟೆ ಮನೆಯಲ್ಲಿ ಹುಟ್ಟಿದಾಗಿನಿಂದ ವಾಸ್ತವ್ಯವಿದ್ದೇನೆ. ನಾನು ವಾಸ್ತವ್ಯವಿರುವ ಮನೆಯ ಡೋರ್ ನಂಬ್ರ ಗೊತ್ತಿಲ್ಲ. ನಾನು ವಾಸವಿರುವ ಜಾಗದ ಸರ್ವೆ ನಂಬ್ರ ಗೊತ್ತಿಲ್ಲ. ಸದರಿ ಜಾಗದ ವಿಸ್ತೀರ್ಣ 15 ಸೆಂಟ್ಸ್. ಕಾರಿಕಟ್ಟೆ ಯಲ್ಲಿ ನನ್ನ ವಾಸ್ತವ್ಯದ ಮನೆಯಲ್ಲದೇ ಅದರ ಸುತ್ತ-ಮುತ್ತ 20 ಸೆಂಟ್ಸ್ ಸ್ಥಳವಿದೆ. ಸದರಿ ಸ್ಥಳ ಗದ್ದೆ. ಗದ್ದೆ ಸ್ಥಳದ ಸರ್ವೆ ನಂಬ್ರ ಗೊತ್ತಿಲ್ಲ. ಆ ಎರಡೂ ಸ್ಥಳಗಳಿಗೆ ಹೊಂದಿಕೊಂಡು ಯಾವುದೇ ಸರಕಾರಿ ಸ್ಥಳ ಇಲ್ಲ.

3. ನಾನು ಸರ್ವೆ ನಂಬ್ರ 362 ರಲ್ಲಿರುವ ಸರಕಾರಿ ಸ್ಥಳವನ್ನು ಅತಿಕ್ರಮಿಸಿದ್ದೇನೆ. ಆ ಕುರಿತು ನಾನು ಅಕ್ರಮ ಸಕ್ರಮಕ್ಕೆ ಅರ್ಜಿಯನ್ನು 2001 ನೇ ಇಸವಿಯಲ್ಲಿ ಸಲ್ಲಿಸಿದ್ದೇನೆ. ಅರ್ಜಿಯನ್ನು ಬೈಂದೂರು ತಾಲೂಕು ಕಛೇರಿಯಲ್ಲಿ ನೀಡಿರುತ್ತೇನೆ. ನಾನು ಸದರಿ ಅರ್ಜಿಯನ್ನು ಅಕ್ರಮ ಸಕ್ರಮಕ್ಕೆ ನೀಡಿರುತ್ತೇನೆ. ನಾನು ಯಾವ ಸ್ಥಳದಲ್ಲಿ ಸ್ವಾಧೀನತೆಯಲ್ಲಿ ಇದ್ದೆನೋ ಅದೇ ಸ್ಥಳದ ಸರ್ವೆ ನಂಬ್ರನ್ನು ನಮೂದಿಸಿ ಅರ್ಜಿಯನ್ನು ನೀಡಿರುತ್ತೇನೆ. ನಾನು ಅರ್ಜಿ ನೀಡಿರುವ ಸ್ಥಳದ ಸರ್ವೆ ನಂಬರ್ ನ ಜಾಗ ನನಗೆ

ಮಂಜೂರಾಗಿರುತ್ತದೆ. ಅಕ್ರಮ ಸಕ್ರಮಕ್ಕೆ ಅರ್ಜಿ ನೀಡುವಾಗ ನನ್ನ ಸ್ವಂತ ಪಟ್ಟಾ ಸ್ಥಳದ ವಿವರವನ್ನು ಅರ್ಜಿಯಲ್ಲಿ ನಮೂದಿಸಬೇಕು ಎಂದರೆ ಸರಿ. ನಾನು ಸಲ್ಲಿಸಿರುವ ಅರ್ಜಿಯಲ್ಲಿ ಪಟ್ಟಾ ಸ್ಥಳದ ವಿವರವನ್ನು ನಮೂದಿಸಿರುವುದಿಲ್ಲ. ನಾನು ಪಟ್ಟಾ ಸ್ಥಳದ ವಿವರವನ್ನು ನಮೂದಿಸದೇ ಇರಲು ಯಾವುದೇ ಕಾರಣವಿಲ್ಲ.

**ಮುಂದುವರಿದ ವಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**